ಅ)

ವರ್ಷ	ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ
1990-91	16	ರೂ. 21.66 ಲಕ್ಷ
1991-92	14	ರೂ. 18.13 ಲಕ್ಷ

ಆ)

ವರ್ಷ	ಬಿಡುಗಡೆಯಾದ ಹಣ	ವೆಚ್ಚ
1990-91	ರೂ. 6.5 ಲಕ್ಷ	ರೂ. 7.3 ಲಕ್ಷ
1991-92	ರೂ. 12 ಲಕ್ಷ	ರೂ. 2.79 ಲಕ್ಷ

(ಜನವರಿ 92ರವರೆಗೆ)

ಇ) ಅವಶ್ಯಕತೆಯ ಅನುಸಾರ ಅನುದಾನ ಲಭ್ಯವಾದಲ್ಲಿ ಈ ಕಾಮಗಾರಿಗಳನ್ನು 2 ವರ್ಷಗಳಲ್ಲಿ ಪೂರ್ಣಗೊಳಿಸಲಾಗುವುದು ಇದರಿಂದ ಸುಮಾರು 313.90 ಹೆಕ್ಟೇರು ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸಲಾಗುವುದು.

ಕಾಡಾಕ್ಕೆ ಹಣ ಬಿಡುಗಡೆ ಮಾಡುವ ಬಗ್ಗೆ

87-ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಭಾರೀ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗದ ಕಾಡಾ ಕಚೇರಿಯಲ್ಲಿ ಹಿಂದಿನ ಸಾಲಿನ 1990-91ನೇ ಕಾಮಗಾರಿಗಳಿಗೆ ಬಿಡುಗಡೆ ಆಗಬೇಕಾಗಿರುವ ಬಾಕಿ ಹಣ ಎಷ್ಟು ಹಾಗೂ ಅದನ್ನು ಯಾವಾಗ ಬಿಡುಗಡೆ ಮಾಡಲಾಗುವುದು ?

ಆ) 1991-92ಕ್ಕೆ ಬಿಡುಗಡೆ ಮಾಡಿರುವ ಹಣ ಎಷ್ಟು ? ಮತ್ತು ಇದ್ದ ಬೇಡಿಕೆ ಎಷ್ಟು ?

ಇ) 1991-93ಕ್ಕೆ ಎಷ್ಟಕ್ಕೆ ಬಂದಿದೆ ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರೀ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) 1990-91ನೇ ಸಾಲಿನ ಅಂತ್ಯಕ್ಕೆ ಕಾಮಗಾರಿಗಳಿಗಾಗಿ ಬಾಕಿ ಇದ್ದ ರೂ. 129.49 ಲಕ್ಷಗಳು. ಅದನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ.

ಆ) 1991-92ನೇ ಸಾಲಿಗೆ ಜನವರಿ ಅಂತ್ಯದವರೆಗೆ ಬಿಡುಗಡೆ ಮಾಡಿರುವ ಹಣ ರೂ. 257.33 ಲಕ್ಷಗಳು. ಸರ್ಕಾರ ಅಂಗೀಕರಿಸಿದ ಆಯವ್ಯಯದಂತೆ ಬೇಡಿಕೆ ರೂ. 257.20 ಲಕ್ಷಗಳು.

ಇ) 1992-93ನೇ ಸಾಲಿಗೆ ರೂ. 308.64 ಲಕ್ಷಗಳಿಗೆ ಆಯವ್ಯಯದ ಬೇಡಿಕೆ ಬಂದಿದೆ.

ರಸ್ತೆ ರಿಪೇರಿ ಬಗ್ಗೆ.

86-ಶ್ರೀ ಕೆ.ಎನ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯದ ಲೋಕೋಪಯೋಗಿ ಇಲಾಖೆಯ ರಸ್ತೆಗಳನ್ನು ದುರಸ್ತಿ ಮಾಡಲು ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ರೂ.40 ಲಕ್ಷ ಕಾಮಗಾರಿ ತೆಗೆದು ಕೊಳ್ಳುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ ?